ಸೇಡಂ ತಾಲ್ಲೂಕಿನ ಕೆರೆ ಕಾಮಗಾರಿ

5037 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ನೆರೆಟ್ಟಾ ಪಹಾಡ್ ಕೆರೆ ಕಾಮಗಾರಿ ಪ್ರಾರಂಭವಾಗಿ ಸುಮಾರು 3-4 ವರ್ಷಗಳಾಗಿ ಅವಧಿ ಮೀರಿದರೂ ಸಹ ಕೆಲಸ ಪೂರ್ತಿಯಾಗದೇ ಇಲ್ಲಿಯವರೆಗೆ ಒಂದು ಎಕರೆಗೂ ಸಹ ನೀರಾವರಿ ಸೌಲಭ್ಯ ಒದಗಿಲ್ಲದಿರಲು ಕಾರಣಗಳೇನು?*

ಆ) *ಇದರಲ್ಲಿ ಉಳಿದಿರುವ ಕೆಲಸಗಳೇನು? ಕೆಲಸಗಳ ವಿವರ ನೀಡಿ? ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು?*

ಇ) *ಈ ಉಳಿದಿರುವ ಕೆಲಸವನ್ನು ಪೂರ್ಣಗೊಳಿಸಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 24.4.98ರಲ್ಲಿ ಈ ಕಾಮಗಾರಿಯನ್ನು ಕೈಕೊಳ್ಳಲಾಗಿರುತ್ತದೆ. ಏರಿಯ ಕೆಲಸ ಪೂರ್ಣವಾಗಿರುತ್ತದೆ. ಕಾಲುವೆಗಳ ಕೆಲಸ ಪೂರ್ಣಗೊಳ್ಳದಿರುವ ಕಾರಣ ನೀರಾವರಿ ಸೌಲಭ್ಯ ಒದಗಿಸಲಾಗಲಿಲ್ಲ.

ಆ) ಈ ಕೆರೆಯ ಎಡದಂಡೆ ಕಾಲುವೆಯು 720 ಮೀ. ಮತ್ತು ಇದರ ಸಿ.ಡಿ. ವರ್ಕ್ಸ್ ಲೈನಿಂಗ್ ಕೆಲಸ ಉಳಿದಿರುತ್ತದೆ. ಹಾಗೂ ಬಲದಂಡೆ ಕಾಲುವೆಯ 2.05ಕಿ.ಮೀ. ಕಾಲುವೆಯ ಕಾಮಗಾರಿಯ ಕೆಲಸ, ಸಿ.ಡಿ. ವರ್ಕ್ಸ್‌ಗಳು ಉಳಿದಿರುತ್ತವೆ. ಈ ಮೇಲಿನ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಇಲ್ಲಿಯವರೆಗೆ ಖರ್ಚಾದ ಹಣ ರೂ. 169.51 ಲಕ್ಷಗಳು.

ಇ) 31ನೇ ಮಾರ್ಚ್ 2001ರ ಒಳಗೆ ಮುಗಿಸಲಾಗುವುದು.

ಸೇಡಂ ತಾಲ್ಲೂಕಿನ ಅಲ್ಲಿಪೂರ್ ಕೆರೆ ಕಾಮಗಾರಿಗಳು

5038 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಅಲ್ಲಿಪೂರ್ ಕೆರೆ ಕಾಮಗಾರಿಗಳು, ಕಾಲುವೆಗಳು ಇತ್ಯಾದಿ ಪೂರ್ತಿಯಾಗಿ ಅದರ ಕೆಳಿಗೆ ನೀರಾವರಿಯಾಗುವ ಕ್ಷೇತ್ರ ಎಷ್ಟು? ನೀರಾವರಿ ಸೌಲಭ್ಯ ನಿಗಧಿತ ಕ್ಷೇತ್ರಕ್ಕೆ ಲಭ್ಯವಾಗಿದೆಯೇ?*

ಆ) *ಒಂದು ವೇಳೆ ಪೂರ್ತಿಯಾಗಿಲ್ಲವೆಂದರೆ ಉಳಿದಿರುವ ಕೆಲಸಗಳು ಯಾವುವು?*

ಇ) *ಇದರಲ್ಲಿ ಕಾಮಗಾರಿಗಳು ಉಳಿದಿದ್ದರೆ ಅವರ ಗುತ್ತಿಗೆ ಅವಧಿ ಮುಗಿದಿಲ್ಲವೇ? ಗುತ್ತಿಗೆ*